ಸಂಖ್ಯೆ/01/202
11.12.19
ಗ್ರಾಮ ಪಂಚಾಯತಿ ಕಾರ್ಯಾಲಯ ಕೋಲಾರ ತಾಲ್ಲೂಕು

ಕರ್ನಾಟಕ ಸರಕಾರ

# ಅರಾಭಿಕೊತ್ತನೂರು ಗ್ರಾಮ ಪಂಚಾಯತಿ ಕಾರ್ಯಾಲಯ

## ಕೋಲಾರ ತಾಲ್ಲೂಕು

ಸಂಖ್ಯೆ: ಅ ಕೊ ಗ್ರಾ ಪಂ/ ಸಿ ಆರ್/01/202/2019–20 ದಿನಾಂಕ : 11/12/2019

## : ನಕ್ಷೆ ಮಂಜೂರಾತಿ ಪತ್ರ :

ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು, ವಕ್ಕಲೇರಿ ಹೋಬಳಿ, ಅರಾಭಿಕೊತ್ತನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಅರಾಭಿಕೊತ್ತನೂರು ಗ್ರಾಮದ ಸ.ನಂ. 20/1 ರಲ್ಲಿ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಆಗಿರುವ 2 ಎಕರೆ 16 3/4 ಗುಂಟೆ ಪ್ರದೇಶದಲ್ಲಿ (9,387.60 ಚದರ ಮೀಟರು – ಇ ಖಾತಾ ದಾಖಲೆಯನುಸಾರ) ಗ್ರಾಮ ಪಂಚಾಯತಿ ದಾಖಲೆ ಸಂಖ್ಯೆ 711/762/684 ರ ವಿಸ್ತೀರ್ಣ 9,387.60 ಚದರ ಮೀಟರುಗಳು, ಸ್ವತ್ತಿನ ಸಂಖ್ಯೆ 151900700200620032 ಪ್ರದೇಶದಲ್ಲಿ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತಿ ಕೋಲಾರ, ಇವರ ಜ್ಞಾಪನ ಸಂಖ್ಯೆ ತಾಪಂಕೋ/ಸಿಆರ್/ ಕಾನಿಅ/ ಆ.ನ.ಮ.ನಿ/01/2019–20 ರ ದಿನಾಂಕ : 09/12/2019 ರ ಆದೇಶದಂತೆ ನಕ್ಷೆ ಮಂಜೂರಾತಿ ಮತ್ತು ಸದರಿ ಪ್ರದೇಶದಲ್ಲಿ 11 ಮೀಟರ್ ಗಿಂತ ಎತ್ತರ ಕಟ್ಟಡ ನಿರ್ಮಿಸಲು ಅನುಮತಿ ದೊರೆತಿರುತ್ತದೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಅರಾಭಿಕೊತ್ತನೂರು ಗ್ರಾಮ ಪಂಚಾಯಿತಿ
ಕೋಲಾರ ತಾಲ್ಲೂಕು.

ರವರಿಗೆ,

ಶ್ರೀ ಸತೀಶ್ ಕೋಶಿ
ಮೆ. ಫೆಲಿಸಿಟಿ ಅಡೋಬ್ ಎಲ್ ಎಲ್ ಪಿ ಪರವಾಗಿ
(Formerly known as Tumkur Nivas LLP)
ನಂ.5 ಎ ಸಿ–712, 5 ನೇ ಅಡ್ಡರಸ್ತೆ , ಮೊದಲನೇ ಬ್ಲಾಕ್
ಹೆಚ್ ಆರ್ ಬಿ ಆರ್ ಲೇಔಟ್, ಕಲ್ಯಾಣ ನಗರ ಪೋಸ್ಟ್
ಬೆಂಗಳೂರು 560043.

ಮಾನ್ಯರೇ,

ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು, ವಕ್ಕಲೇರಿ ಹೋಬಳಿ, ಅರಾಭಿಕೊತ್ತನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಅರಾಭಿಕೊತ್ತನೂರು ಗ್ರಾಮದ ಸ.ನಂ. 20/1 ರಲ್ಲಿ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಆಗಿರುವ 2 ಎಕರೆ 16 3/4 ಗುಂಟೆ ಪ್ರದೇಶದಲ್ಲಿ (9,387.60 ಚದರ ಮೀಟರು – ಇ ಖಾತಾ ದಾಖಲೆಯನುಸಾರ) ಗ್ರಾಮ ಪಂಚಾಯತಿ ದಾಖಲೆ ಸಂಖ್ಯೆ 711/762/684 ರ ವಿಸ್ತೀರ್ಣ 9,387.60 ಚದರ ಮೀಟರುಗಳು, ಸ್ವತ್ತಿನ ಸಂಖ್ಯೆ 151900700200620032

K.N. Savitha
ಅಧ್ಯಕ್ಷರು
ಅರಾಭಿಕೊತ್ತನೂರು ಗ್ರಾಮ ಪಂಚಾಯಿತಿ
ಕೋಲಾರ ತಾಲ್ಲೂಕು

ಪ್ರದೇಶದಲ್ಲಿ ಭೂ ಮಾಲೀಕರಾದ ಫೆಲಿಸಿಟಿ ಅಡೋಬ್ ಎಲ್ ಎಲ್ ಪಿ , ಬೆಂಗಳೂರು ರವರು ಪ್ರಧಾನ ಮಂತ್ರಿ ಯೋಜನೆಯಡಿಯಲ್ಲಿ ( ಪಿ ಎಂ ಎ ವೈ ) ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಬ್ಲಾಕ್ ಎ , ಬ್ಲಾಕ್ ಬಿ, ಬ್ಲಾಕ್ ಸಿ ಮತ್ತು ಬ್ಲಾಕ್ ಡಿ ಗಳ ಕೆಳಹಂತ, ನೆಲ ಮತ್ತು 12 ಮೇಲಂತಸ್ತುಗಳನ್ನು ಒಳಗೊಂಡ ಒಟ್ಟು 520 (ಐದು ನೂರ ಇಪ್ಪತ್ತು ) ವಸತಿ ಸಮುಚ್ಚಯ ಘಟಕಗಳ ನಿರ್ಮಾಣ ಮಾಡಲು ನಮ್ಮ ಗ್ರಾಮ ಪಂಚಾಯತಿ ಕಛೇರಿಗೆ ದಿನಾಂಕ 17/08/2019 ರಂದು ಅರ್ಜಿ ಸಲ್ಲಿಸಿ ನಕ್ಷೆ ಮಂಜೂರಾತಿ ಕೋರಿರುತ್ತೀರಿ. ನಕ್ಷೆ ಮಂಜೂರಾತಿಯನ್ನು ಮತ್ತು ಅನುಮೋದನೆಯನ್ನು ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತಿ ಕೋಲಾರ, ಇವರ ಜ್ಞಾಪನ ಸಂಖ್ಯೆ ತಾಪಂಕೋ/ಸಿಆರ್/ಕಾನಿಅ/ಆ.ನ.ಮ.ನಿ/01/2019–20 ರ ದಿನಾಂಕ: 09/12/2019 ರ ಆದೇಶದಂತೆ ನಕ್ಷೆ ಮಂಜೂರಾತಿ ಮತ್ತು ಸದರಿ ಪ್ರದೇಶದಲ್ಲಿ 11 ಮೀಟರ್ ಗಿಂತ ಎತ್ತರ ಕಟ್ಟಡ ನಿರ್ಮಿಸಲು ಅನುಮತಿ ಆದೇಶದಂತೆ ನೀಡಿದೆ .

## : ಷರತ್ತುಗಳು :

1) ಸಕ್ಷಮ ಪ್ರಾಧಿಕಾರದಿಂದ ಮಂಜೂರಾದ ನಕ್ಷೆಯ ಪ್ರತಿಯನ್ನು ಕಟ್ಟಡ ನಿರ್ಮಾಣ ಮಾಡುವ ಸ್ಥಳದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.

2) ಭೂ ಮಾಲೀಕರು ಕೋರಿರುವ ಸರ್ವೇ ನಂಬರ್ 20/1 ರಲ್ಲಿ ಪ್ರಸ್ತುತ ತಯಾರಿಸಿ ಸಲ್ಲಿಸಿರುವ ನಕ್ಷೆಯಲ್ಲಿರುವಂತೆಯೇ , ಮಂಜೂರಾತಿಯಾದ ನಕ್ಷೆಯ ಪ್ರಕಾರ ಕಟ್ಟಡ ನಿರ್ಮಾಣ ಮಾಡತಕ್ಕದ್ದು.

3) ಪೂರ್ಣಗೊಂಡ ಮನೆಯ ಅಥವಾ ಕಟ್ಟಡವನ್ನು ವಾಸಕ್ಕೆ ಉಪಯೋಗಿಸುವ ಮೊದಲು ಸಂಬಂಧಪಟ್ಟ ಅಧಿಕಾರಿಗಳಿಂದ ( ಪ್ರಾಧಿಕಾರ ) ವಾಸಯೋಗ್ಯ ಅನುಮತಿ ಪತ್ರವನ್ನು ಪಡೆಯತಕ್ಕದ್ದು.

4) ನಿವೇಶನದ ಸುತ್ತಳತೆಯಲ್ಲಿ ಹಸಿರು ಸಸಿಗಳನ್ನು ಕಡ್ಡಾಯವಾಗಿ ನೆಡತಕ್ಕದ್ದು.

5) ಕಟ್ಟಡ ಕಾಮಗಾರಿ ಪ್ರಾರಂಭಿಸುವ ಮೊದಲು ಕಾಮಗಾರಿ ಸ್ಥಳದಲ್ಲಿ ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸಿ, ಸುತ್ತಲಿನ ಪರಿಸರದಲ್ಲಿ ಕಡ್ಡಾಯವಾಗಿ ನೈರ್ಮಲ್ಯ ಕಾಪಾಡತಕ್ಕದ್ದು.

6) ಒಂದು ವೇಳೆ ನಕ್ಷೆಯಲ್ಲಿನ ವಿನ್ಯಾಸಗಳನ್ನು ಬದಲಾವಣೆ ಮಾಡಿಕೊಳ್ಳಬೇಕಾದಲ್ಲಿ ಸಂಬಂಧಿಸಿದ ಇಲಾಖೆಯಿಂದ ಮರು ವಿನ್ಯಾಸ ನಕ್ಷೆ ತಯಾರಿಸಿ ಮರು ಅನುಮೋದಿಸಿಕೊಳ್ಳತಕ್ಕದ್ದು.

7) ತಯಾರಿಸಿರುವ ನಕ್ಷೆ ಮೇಲ್ಭಾಗದಲ್ಲಿ ಹೈ ಟೆನ್ಶನ್ ವೈರ್ ಹಾದುಹೋಗಿಲ್ಲದಿರುವ ಬಗ್ಗೆ ಸಂಬಂಧಿಸಿದ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು.

8) ಸದರಿ ನಿವೇಶನದ ಜಾಗದಲ್ಲಿ ಪರಿಸರ ನೈರ್ಮಲ್ಯ ಕಾಪಾಡಿಕೊಳ್ಳುವುದು.

9) ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಇತರೆ ವಿವಿಧ ಇಲಾಖೆಗಳಿಂದ (ಅಗತ್ಯ/ಅವಶ್ಯಕವೆನಿಸುವ) ತಾಂತ್ರಿಕ ಅನುಮೋದನೆ ಮತ್ತು ಪೂರ್ವಾನುಮತಿ/ನಿರಾಕ್ಷೇಪಣಾ ಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆದುಕೊಳ್ಳತಕ್ಕದ್ದು ಮತ್ತು ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಿದ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಪಂಚಾಯತಿ ಅಭಿವೃದ್ಧಿ ಅಧಿಕಾರಿ
ಅರಾಭಿಕೊತ್ತನೂರು ಗ್ರಾಮ ಪಂಚಾಯಿತಿ
ಕೋಲಾರ ತಾಲ್ಲೂಕು.

K.N. Sawitha
ಅಧ್ಯಕ್ಷರು
ಅರಾಭಿಕೊತ್ತನೂರು ಗ್ರಾಮ ಪಂಚಾಯಿತಿ
ಕೋಲಾರ ತಾಲ್ಲೂಕು

10) ಅರ್ಜಿದಾರರು ಕಟ್ಟಡ ನಕ್ಷೆ ಮಂಜೂರಾತಿ ಸಂಧರ್ಭದಲ್ಲಿ ಬಾಕಿ ಇರುವ ಎಲ್ಲಾ ಶುಲ್ಕಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಕಡ್ಡಾಯವಾಗಿ ಪಾಲಿಸತಕ್ಕದ್ದು.

11) ಗ್ರಾಮ ಪಂಚಾಯತಿಗೆ ಪಾವತಿಸಬೇಕಾದ ಶುಲ್ಕಗಳನ್ನು ಕಾಲಕಾಲಕ್ಕೆ ಹಾಗೂ ಪಂಚಾಯತಿಯು ನಿಗಧಿಪಡಿಸಿದ ತೆರಿಗೆ ಮೊತ್ತವನ್ನು ಪಾವತಿಸಿ ರಸೀದಿ ಪಡೆಯತಕ್ಕದ್ದು.

12) ಅರ್ಜಿದಾರರು ಕಾಮಗಾರಿ ಪ್ರಾರಂಭಿಸುವ ಮೊದಲು ಕಾಮಗಾರಿ ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ಕಾಮಗಾರಿ ಮುಕ್ತಾಯದ ನಂತರ ಸ್ವಾಧೀನಾನುಭವ ಪತ್ರಗಳನ್ನು ಗ್ರಾಮ ಪಂಚಾಯತಿ ಕಛೇರಿಯಿಂದ ಪಡೆಯುವುದು ಕಡ್ಡಾಯವಾಗಿರುತ್ತದೆ.

13) ಅರ್ಜಿದಾರರು ಕಟ್ಟಡ ನಿರ್ಮಾಣಕ್ಕೆ ಅವಶ್ಯಕವಾದ ವಿದ್ಯುತ್‌ಚ್ಛಕ್ತಿಯ ಪರ್ಯಾಯ ಸೋಲಾರ್ ಉಪಕರಣಗಳನ್ನು ಅಳವಡಿಸತಕ್ಕದ್ದು.

14) ಒಂದು ವೇಳೆ ಭೂ ಮಾಲೀಕರು ಸಲ್ಲಿಸಿರುವ ದಾಖಲೆಗಳಲ್ಲಿ ಯಾವುದೇ ರೀತಿಯ ಲೋಪ ದೋಷಗಳು ಹಾಗೂ ನ್ಯಾಯಾಲಯ ಪ್ರಕರಣಗಳು ಮುಂದೇನಾದರೂ / ಯಾವಾಗ ಕಂಡುಬಂದರೂ ನೀಡಿರುವ ಅನುಮತಿಯು ತಾನೇ ತಾನಾಗಿ ರದ್ದಾಗುತ್ತದೆ. ಈ ರದ್ದತಿಗೆ ತಾಲ್ಲೂಕು ಪಂಚಾಯತಿಯಾಗಲೀ ಅಥವಾ ಗ್ರಾಮ ಪಂಚಾಯತಿಯಾಗಲಿ, ಜವಾಬ್ದಾರಿಯಾಗಿರುವುದಿಲ್ಲ. ಇದರ ಸಂಪೂರ್ಣ ಜವಾಬ್ದಾರಿಯು ಭೂ ಮಾಲೀಕರದ್ದಾಗಿರುತ್ತದೆ.

15) ಕಟ್ಟಡ ಮಂಜೂರಾತಿಯ ಕುರಿತು ಕಾರ್ಮಿಕ ಇಲಾಖೆ ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

16) ಕಟ್ಟಡ ನಿರ್ಮಾಣ ವೆಚ್ಚ ದ ಶೇಕಡ 1 (ಒಂದು) ರಷ್ಟು ಮೊತ್ತವನ್ನು ಕಾರ್ಮಿಕ ಕಲ್ಯಾಣ ನಿಧಿಗೆ ಪಾವತಿಸಲು ಸಂಬಂದಪಟ್ಟ ಗ್ರಾಮ ಪಂಚಾಯತಿ ಗೆ ಪಾವತಿಸಿ ರಸೀದಿ ಪಡೆಯತಕ್ಕದ್ದು.

17) ಕಟ್ಟಡದ ಗುಣಮಟ್ಟ, ಸುರಕ್ಷತೆ ಹಾಗೂ ವಿನ್ಯಾಸಗಳಿಗೆ ಗ್ರಾಮ ಪಂಚಾಯತಿ ಕಚೇರಿಯಾಗಲೀ, ತಾಲ್ಲೂಕು ಪಂಚಾಯತಿ ಕಛೇರಿಯಾಗಲೀ ಯಾವುದೇ ರೀತಿಯಿಂದ ಜವಾಬ್ದಾರರಾಗಿರುವುದಿಲ್ಲ. ಈ ಅಂಶಗಳ ಪೂರ್ಣ ಜವಾಬ್ದಾರಿಯು ಭೂ ಮಾಲೀಕರ/ಅಭಿವೃದ್ಧಿ ದಾರರದ್ದೇ ಆಗಿರುತ್ತದೆ.

18) ಯೋಜನೆಯಲ್ಲಿ ಮಳೆ ನೀರು ಕೊಯ್ಲು ಗಾಗಿ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಿಕೊಂಡು ಗೃಹ ಹಾಗೂ ಇನ್ನಿತರೆ ಉಪಯೋಗಗಳಿಗಾಗಿ ಬಳಸಿಕೊಳ್ಳತಕ್ಕದ್ದು.

19) ಕುಡಿಯುವ ನೀರು ಹಾಗೂ ಬಳಸುವ ನೀರಿಗಾಗಿ ಪ್ರತ್ಯೇಕ ಪೈಪ್ ಲೈನ್ ವ್ಯವಸ್ಥೆ ಕಲ್ಪಿಸಿಕೊಳ್ಳತಕ್ಕದ್ದು.

20) ಕಟ್ಟಡ ನಿರ್ಮಾಣದಲ್ಲಿ ಒಳ ಚರಂಡಿ ವ್ಯವಸ್ಥೆ ಯನ್ನು ಕೈಗೊಳ್ಳತಕ್ಕದ್ದು.

21) ಅರ್ಜಿದಾರರು ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಪಡೆಯುವ ಸಂಧರ್ಭದಲ್ಲಿ ಘನ ದ್ರವ ತ್ಯಾಜ್ಯ ವಿಲೇವಾರಿ, ಕುಡಿಯುವ ನೀರು ಸರಬರಾಜು ವ್ಯವಸ್ಥೆಗಳನ್ನು ಸರಿಯಾಗಿ ನಿರ್ವಹಿಸಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ದೃಡೀಕರಣ ಪತ್ರ ಪಡೆಯತಕ್ಕದ್ದು

K.N. Savitha
ಅಧ್ಯಕ್ಷರು
ಅರಾಭಿಕೊತ್ತನೂರು ಗ್ರಾಮ ಪಂಚಾಯಿತಿ
ಕೋಲಾರ ತಾಲ್ಲೂಕು

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಅರಾಭಿಕೊತ್ತನೂರು ಗ್ರಾಮ ಪಂಚಾಯಿತಿ
ಕೋಲಾರ ತಾಲ್ಲೂಕು.

22) ಪ್ರಧಾನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಬೆಂಗಳೂರು ರವರು ದಿನಾಂಕ 04/03/2006 ರಂದು ವಿಧಿಸಿರುವ ಷರತ್ತುಗಳಿಗೆ ಭೂ ಮಾಲೀಕರು/ಅಭಿವೃದ್ಧಿ ದಾರರು ಬದ್ಧರಾಗಿರತಕ್ಕದ್ದು.

23) ಅರ್ಜಿದಾರರು ನೀರು ಸರಬರಾಜಿಗೆ ಗ್ರಾಮ ಪಂಚಾಯತಿಯನ್ನು ಅವಲಂಭಿಸದೇ ತಮ್ಮ ಸ್ವಂತ ಖರ್ಚಿನಲ್ಲಿ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.

24) ಅರ್ಜಿದಾರರು ವಿದ್ಯುತ್ ಪರಿವರ್ತಕಗಳನ್ನು ಅವುಗಳಿಗೆ ಮೀಸಲಿರಿಸಿದ ಜಾಗದಲ್ಲಿಯೇ ಸ್ಥಾಪಿಸುವುದು.

25) ಅರ್ಜಿದಾರರು ಕಟ್ಟಡದಲ್ಲಿನ ವಿದ್ಯುತೀಕರಣ ಕಾಮಗಾರಿಗಳನ್ನು ನೊಂದಾಯಿತ ವಿದ್ಯುತ್ ಗುತ್ತಿಗೆದಾರರಿಂದ ಮಾಡಿಸತಕ್ಕದ್ದು.

26) ಅರ್ಜಿದಾರರು ನಕ್ಷೆ ಮಂಜೂರಾತಿಗಾಗಿ ಯಾವುದೇ ತಪ್ಪು ದಾಖಲೆಗಳನ್ನು /ಮಾಹಿತಿಯನ್ನು ಸಲ್ಲಿಸಿರುವುದು ಕಂಡು ಬಂದಲ್ಲಿ , ಮಂಜೂರಾದ ನಕ್ಷೆಯನ್ನು ಏಕಪಕ್ಷೀಯವಾಗಿ ರದ್ದುಪಡಿಸಲಾಗುವುದು.

27) ಉದ್ದೇಶಿತ ಬಹು ಮಹಡಿ ಕಟ್ಟಡದ ನಕ್ಷೆ ಮಂಜೂರಾತಿ ಆಡಳಿತಾತ್ಮಕವಾಗಿದ್ದು, ತಾಂತ್ರಿಕ ಅನುಮೋದನೆಯನ್ನು ಅಗತ್ಯತೆಯಿರುವ ಇಲಾಖೆಗಳಾದ ವಿದ್ಯುತ್, ಪರಿಸರ ಮಾಲಿನ್ಯ ಮಂಡಳಿ, ಅಗ್ನಿಶಾಮಕ , ರಾಷ್ಟ್ರೀಯ ಹೆದ್ದಾರಿ , ಎಂ ಓ ಇ ಎಫ್ ಹಾಗೂ ಅಗತ್ಯವಿದ್ದಲ್ಲಿ ಇತರೆ ಸಂಬಂಧಪಟ್ಟ ಇಲಾಖೆಗಳಿಂದ ತಾಂತ್ರಿಕ ಅನುಮೋದನೆಗಳನ್ನು ಪಡೆಯತಕ್ಕದ್ದು.

28) ಅರ್ಜಿದಾರರು ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯುವ ಮೊದಲು ಅಗತ್ಯ/ಅವಶ್ಯಕವೆನಿಸುವ ಎಲ್ಲಾ ಇಲಾಖೆಗಳಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ/ತಾಂತ್ರಿಕ ಅನುಮೋದನೆಗಳನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

29) ಕಟ್ಟಡ ನಿರ್ಮಾಣ ಸಂಧರ್ಭದಲ್ಲಿ ಬಾಲ ಕಾರ್ಮಿಕರ ಬಳಕೆಯನ್ನು ಕಡ್ಡಾಯವಾಗಿ ನಿಷೇದಿಸಿದೆ.

30) ಅಭೀವೃದ್ಧಿ ದಾರರು ಕಟ್ಟಡ ನಿರ್ಮಾಣಕ್ಕೆ ಅಗತ್ಯ ತಾಂತ್ರಿಕ ವಿನ್ಯಾಸಗಳನ್ನು ತಯಾರಿಸಿಕೊಂಡು ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳತಕ್ಕದ್ದು.

31) ಅಭಿವೃದ್ಧಿ ದಾರರು ಕಟ್ಟಡ ನಿರ್ಮಾಣ ಕಾರ್ಯವನ್ನು ಸರ್ಕಾರದಿಂದ ನೊಂದಾಯಿತ ವಿನ್ಯಾಸಕಾರರಿಂದ ಪೂರೈಸುವುದು ಹಾಗೂ ನಿರ್ಮಾಣ ಕಾರ್ಯ ಪೂರ್ಣಗೊಂಡ ನಂತರ ವಿನ್ಯಾಸಗಾರರಿಂದ ಪೂರ್ಣಗೊಂಡ ದೃಢೀಕರಣ ಪತ್ರ ಪಡೆಯತಕ್ಕದ್ದು.

32) ಬಹು ಮಹಡಿ ಕಟ್ಟಡ ನಿರ್ಮಿಸಲು ಉದ್ದೇಶಿಸಿರುವ ನಿವೇಶನದ ಜಾಗದಲ್ಲಿ/ ವಿಂಗಡಿಸಿರುವ ಜಾಗದಲ್ಲಿ ಸರ್ಕಾರಿ ರಸ್ತ, ಸರ್ಕಾರಿ ಕಟ್ಟಡ ಮತ್ತು ಇತರೆ ಸರ್ಕಾರಕ್ಕೆ ಮೀಸಲಿಟ್ಟಿರುವ /ಕಾಯ್ದಿರಿಸಿರುವ ಸ್ಥಳಗಳನ್ನು ಗ್ರಾಮ ಪಂಚಾಯತಿಗೆ ಭೂ ಮಾಲೀಕರೇ ಪರಿತ್ಯಾಜ್ಯನಾ ಪತ್ರದ ಮುಖಾಂತರ ಹಸ್ತಾಂತರಿಸತಕ್ಕದ್ದು.

33) ಕಟ್ಟಡ ನಿರ್ಮಾಣ ಸಂಧರ್ಭದಲ್ಲಿ , ಕಟ್ಟಡ ನಿರ್ಮಾಣ ಸಾಮಗ್ರಿಗಳಿಂದಾಗಲೀ ಅಥವಾ ಇನ್ನಾವುದೇ ರೀತಿಯ ಸಾಮಗ್ರಿಗಳಿಂದಾಗಲೀ ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಯಾವುದ ರೀತಿಯ ತೊಂದರೆಯಾಗದಂತೆ ಸೂಕ್ತ ವ್ಯವಸ್ಥೆ ಕೈಗೊಳ್ಳತಕ್ಕದ್ದು.

K.N. Savitha
ಅಧ್ಯಕ್ಷರು
ಅರಾಭಿಕೊತ್ತನೂರು ಗ್ರಾಮ ಪಂಚಾಯಿತಿ
ಕೋಲಾರ ತಾಲ್ಲೂಕು

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಅರಾಭಿಕೊತ್ತನೂರು ಗ್ರಾಮ ಪಂಚಾಯಿತಿ
ಕೋಲಾರ ತಾಲ್ಲೂಕು.

34) ಕಟ್ಟಡ ನಿರ್ಮಾಣ ಸಂಧರ್ಭದಲ್ಲಿ ಉಂಟಾಗುವ ಎಲ್ಲಾ ರೀತಿಯ ಅವಘಡಗಳಿಗೆ ಅಭಿವೃದ್ಧಿದಾರರು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ ಹಾಗೂ ಈ ಬಗ್ಗೆ ನಕ್ಷೆ ಮಂಜೂರಾತಿ ಪ್ರಾಧಿಕಾರ ಜವಾಬ್ದಾರರಾಗಿರುವುದಿಲ್ಲ.

35) ಅರ್ಜಿದಾರರು ಗ್ರಾಮ ಪಂಚಾಯತಿ ಕಾರ್ಯಾಲಯವು ಕಾಲ ಕಾಲಕ್ಕೆ ವಿಧಿಸುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

K.N. Savitha
ಅಧ್ಯಕ್ಷರು
ಅರಾಭಿಕೊತ್ತನೂರು ಗ್ರಾಮ ಪಂಚಾಯತಿ
ಕೋಲಾರ ತಾಲ್ಲೂಕು

ಪಂಚಾಯತಿ ಅಭಿವೃದ್ಧಿ ಅಧಿಕಾರಿ
ಅರಾಭಿಕೊತ್ತನೂರು ಗ್ರಾಮ ಪಂಚಾಯತಿ
ಕೋಲಾರ ತಾಲ್ಲೂಕು.

ಪ್ರತಿಯನ್ನು :

1) ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ ಕೋಲಾರ ರವರ ಸೂಕ್ತ ಮಾಹಿತಿಗಾಗಿ ಸಲ್ಲಿಸಿದೆ.
2) ಕಛೇರಿ ಪ್ರತಿ.